ಶ್ರೀ ಕೆ. ಎಚ್. ಪುಟ್ಟರಂಗನಾಥ್.— ಈಗ ತಾನೇ ತಮ್ಮ ಉತ್ತರದಲ್ಲಿ ಹೇಳಿದ್ದೀರಿ ಶಿರಸ್ತ್ರೇದಾರರು ಈ ಪಹಣಿಯನ್ನು ಮೆಂಟೇನ್ ಮಾಡುವುದಕ್ಕೆ ಹೇಳಿದ್ದೇನೆ ಎಂದು. ಈಗ ಇರುವ ಪದ್ಧತಿ ಪ್ರಕಾರ ಏರೇಜ್ ಅಕೌಂಟೆಂಟ್‌ರವರ ಹತ್ತಿರ 5 ವರ್ಷಗಳ ಕಾಲ ಈ ಪಹಣಿ ಇರುವಂಥ ಪದ್ಧತಿ ಇದೆ. ಆದುದರಿಂದ ಈ ಬಗ್ಗೆ ನಾನು ಹೇಳುವುದು ಏನೆಂದರೆ ಈ ಪಹಣಿಯನ್ನು ಅವರಲ್ಲಿ 5 ವರ್ಷಗಳ ಕಾಲ ಇಡುವ ಬದಲು ಪ್ರತಿವರ್ಷವೂ ತಾಸೀಲ್ದಾರರ ಹತ್ತಿರ ಇದನ್ನು ವೆರಿಫೈ ಮಾಡಿಸಿ ನರಿಪಡಿಸುವ ಒಂದು ವ್ಯವಸ್ಥೆ ಮಾಡಿದರೆ ಈ ಅವ್ಯವಹಾರಗಳು ತಪ್ಪುತ್ತದೆ ಅನ್ನುವುದನ್ನು ತಾವು ಒಪ್ಪುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳಿದ ನಲಹೆ ಪ್ರಕಾರ 5 ವರ್ಷಗಳ ಕಾಲ ಅವರ ಹತ್ತಿರ ಪಹಣಿ ಇದ್ದರೂ ಕೂಡ ಪ್ರತಿವರ್ಷವೂ ತಾಲ್ಲೂಕ್ ಆಫೀಸ್‌ಗೆ ಅದನ್ನು ಕಳುಹಿಸಿ ವೆರಿಫೈ ಮಾಡಿಸಿ ಏನಾದರೂ ತಪ್ಪು ಇದ್ದರೆ ಅದನ್ನು ನರಿಪಡಿಸಬೇಕು ಎಂದು ಆರ್ಡರ್ ಮಾಡಿದ್ದೇವೆ.

ಶ್ರೀ ಎ. ನಂಜಪ್ಪ.—ಗ್ರಾಮ ಲೆಕ್ಕಿಗರು ಈ ಪಹಣಿಯನ್ನು ಬರೆಯುವಾಗ ಎಲ್ಲೋ ಕೂತು ಕೊಂಡು ಬರೆಯುವುದರಿಂದ ಈ ಅವ್ಯವಹಾರಗಳು ಬರುತ್ತವೆ. ಆದುದರಿಂದ ಅವರು ಈ ಪಹಣಿಯನ್ನು ಬರೆಯುವಾಗ ಸಂಬಂಧಪಟ್ಟ ಗ್ರಾಮಸ್ಥರು ಮತ್ತು ಪಟೇಲರೊಂದಿಗೆ ಕೂಡಿಕೊಂಡು ಆ ಗ್ರಾಮದಲ್ಲಿ ಈ ಪಹಣಿಯನ್ನು ಬರೆಯುವುದಾದರೆ ಈ ಅಕ್ರಮ ವ್ಯವಹಾರಗಳು ಬರುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಇದನ್ನು ನರಿಪಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮ ಲೆಕ್ಕಿಗರು ಮಾಡುವಂಥ ವ್ಯವಹಾರಗಳು ಎಲ್ಲರಿಗೂ ಗೊತ್ತಿರುವಂಥ ವಿಷಯ. ಆದುದರಿಂದ ಅವರು ಈ ಪಹಣಿಯನ್ನು ಬರೆಯುವಾಗ ಇತರಿಂಥಾವರನ್ನು ಇಟ್ಟುಕೊಂಡು ಬರೆಯಬೇಕು ಎನ್ನುವ ಆಜ್ಞೆ ಮಾಡಿ ಎಂದು ಹೇಳಿದರೆ ಅದನ್ನು ಅಷ್ಟು ಸುಲಭವಾಗಿ ಕಾರ್ಯರೂಪಕ್ಕೆ ತರುವುದು ಕಷ್ಟವಾದ ಕೆಲಸ.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವು ಕಡೆ ಗ್ರಾಮಾಧಿಕಾರಿಗಳು ಗೇಣಿದಾರರಿಗೆ ಅನ್ಯಾಯ ಮಾಡುತ್ತಾರೆಯುರುವುದರಿಂದ ಹಿಪ್ಪೋಟಿ ಕಮೀಷನರ್‌ರವರು ಅವರನ್ನು ಪರ್ಗ ಮಾಡಿದರೂ ಸಹ ಮೇಲಿಂದ ಒತ್ತಡ ಬಂದು ಪುನಃ ಅವರನ್ನು ಅಲ್ಲಿ ಇಡುವ ಹಾಗೆ ಮಾಡಿ ಅವರಿಂದ ಕರುಕುಳ ಕೊಡಿಸುವ ಹಾಗೆ ಮಾಡಿರುವುದು ಸತ್ಯವೇ ? ಇದನ್ನು ರುಜುವಾತು ಮಾಡುವುದಾದರೆ ತಾವು ರಾಜೀನಾಮೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಊಹಾಪೋಹಗಳಿಂದ ಹೇಳಿ ರಾಜಿನಾಮೆ ಕೊಡಿ ಎಂದು ಹೇಳುವುದು ಅಷ್ಟು ಸುಲಭವಾದ ಕೆಲಸವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ,— ಇದು ಸತ್ಯ ಸ್ವಾಮಿ.

(ಉತ್ತರ ಇಲ್ಲ)

ಶ್ರೀ ಬಿ. ಜಿ. ಬಣಕಾರ.—ಈಗ ನಮ್ಮ ರಾಜ್ಯದಲ್ಲಿ ಈ ಬಗ್ಗೆ ಎಷ್ಟು ಟ್ರಬ್ಯೂನರ್ಸ್ ಕಾರ ಮಾಡುತ್ತಾ ಇವೆ. ಎಷ್ಟು ಜನ ಸ್ಪೆಷಲ್ ತಾಸೀಲ್ದಾರ ಮತ್ತು ಅಸಿಸ್ಟೆಂಟ್, ಕಮೀಷನರ್‌ಗಳನ್ನು ನೇಮಕ ಮಾಡಿದ್ದೀರಿ ? ಇನ್ನು ಎಷ್ಟು ವರ್ಷದಲ್ಲಿ ಈ ಟ್ರಿಬ್ಯೂನರ್ ಮಾಡುವ ಕೆಲಸ ಮುಗಿಯುತ್ತದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ ಇಲ್ಲಿರತಕ್ಕಂಥ ಪ್ರಶ್ನೆಗೂ ಸಂಬಂಧವಿಲ್ಲ.

Borewells Sunk in the State

185 C. NAGAMMA KESHAVAMURTHY (Davanagere)—

Will the Minister for Rural Development and Social Welfare be pleased to state:—

(*a*) the number of bore wells sunk in the State (Districtwise figures may be given) ;

(b) of them, the number functioning ;

(c) the action the Government intend to take for the proper maintenance of the pumps erected for drawing the water ?

Sri N. RACHAIAH (Minister for Rural Development and Social Welfare)—

(a) 4,552 (*Vide* Statement enclosed).

(b) 2,138.

(c) As per the Karnataka Village Panchayats and Local Boards Act 1959, maintenance of the Water Supply Schemes is an oblgatory duty of the Panchayats concerned. A special cell has been created in the P.H.E. Department in order to render technical adivice to the Panchayats for proper maintenance of water supply shemes. This cell will also attend to the repairs and replacements of small spare parts subject to the cost of spare parts etc., being borne out of the funds of the respective Panchayats. The Block Development Officers are instructed to keep a watch over the defunct water supply schemes and to see that they are revised.

STATEMENT

Showing Total Number of Bore wells sunk in Karnataka State.

Sl. No.	Name of the District		Total No, of Bore Wells sunk
1.	Belgaum	...	349
2.	Dharwar	...	272
3.	Bijapur	...	473
4.	Gulbarga	...	588
5.	Bidar	...	353
6.	Raichur	...	238
7.	Bellary	...	201
8.	Bangalore	...	91
9.	Kolar	...	51
10.	Tumkur	...	120
11.	Mandya	...	126
12.	Mysore	...	377
13.	Hassan	...	269
14.	Chickmagalur	...	152
15.	Chitradarga	...	750
16.	Karwar	...	43
17.	Shimoga	...	99
18.	South Kanara	...	...
19.	Coog	...	...
		Total	4552

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ತಾವು ಈ ಪ್ರಶ್ನೆಯಲ್ಲಿ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಶೇಕಡಾ 50 ಪರ್ಸೆಂಟ್ ಅಷ್ಟು ಬೋರ್‌ವೆಲ್ಸ್ ಕೆಲಸ ಮಾಡುತ್ತಾ ಇಲ್ಲ ಎಂದು ತಿಳಿಸಿದ್ದೀರಿ. ಇದಕ್ಕೆ ಮುಖ್ಯವಾದ ಕಾರಣ ಏನು ? ಮತ್ತು ಇದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎನ್. ರಾಚಯ್ಯ.—ಇದಕ್ಕೆ ಬಹು ಮುಖ್ಯವಾದ ಕಾರಣ ಪಂಚಾಯಿತಿಯವರು ಸಕಾಲದಲ್ಲಿ ಹಣ ಕೊಡದೇ ಇರತಕ್ಕಂಥಾದ್ದು. ಇದು ಪಂಚಾಯಿತಿಯವರ ಜವಾಬ್ದಾರಿ. ಇನ್ನು ಎರಡನೇ ಕಾರಣ ಈ ಹ್ಯಾಂಡ್ ಪಂಪ್ ಏನು ಇವೆ ಇವಕ್ಕೆ ಕೆಲವು ಸಂದರ್ಭದಲ್ಲಿ ಬೇಕಾದಂಥ ಮೆಷನರಿ, ಸ್ಪೇರ್ ಪಾರ್ಟ್ಸ್ ನ ಕಾಲದಲ್ಲಿ ಒದಗಿಸುತ್ತಾ ಇಲ್ಲ. ಆಗಾಗ್ಗೆ ಪಂಚಾಯಿತಿಯವರು ಈ ಒಂದು ಜವಾಬ್ದಾರಿಯನ್ನು ಇಟ್ಟುಕೊಂಡು ಅವಕ್ಕೆ ಸಕಾಲದಲ್ಲಿ ಹಣ ಒದಗಿಸಿ ರಿಪೇರಿ ಮಾಡಿಸಬೇಕು. ಆದರೂ ಕೂಡ ಸರ್ಕಾರದವರು ಬಹುಭಾಗ ಪಂಪ್‌ಸೆಟ್ಟ್‌ಗಳು ನಡೆಯುವೇ ಇರುವ ಕಾರಣ ಒಂದು ಜವಾಬ್ದಾರಿಯನ್ನು ಇಟ್ಟುಕೊಂಡು ನಂಬರ್ ಪಟ್ಟ ಇಂಜಿನಿಯರಿಂಗ್ ಇಲಾಖೆಗೆ ಈ ಬಗ್ಗೆ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈಗ ಒಂದು ಬೋರ್‌ವೆಲ್‌ಗೆ ಸರ್ಕಾರದವರು ಎಷ್ಟು ಹಣ ಖರ್ಚು ಮಾಡುತ್ತಾ ಇದ್ದಾರೆ ಮತ್ತು ನನ್ನ ಕಾನ್ಸ್ಟಿಟ್ಯೂಯೆನ್ಸಿ ಆದ ಚಿತ್ರದುರ್ಗ ಜಿಲ್ಲೆಗೆ ಬಗ್ಗೆ ಹೇಳುವುದಾದರೆ ಈ ಜಿಲ್ಲೆಯಲ್ಲಿ 750 ಬೋರ್‌ವೆಲ್ಸ್ ಇವೆ ಎಂದು ಹೇಳಿದ್ದೀರಿ. ಇದರಲ್ಲಿ 3 ಬೋರ್‌ವೆಲ್ಸ್ 4 ತಿಂಗಳ ಹಿಂದೆ ಮಾತ್ರ ಆಯಿತು. ಮತ್ತು ಇದರಲ್ಲಿ ಮುಕ್ಕಾಲು ಭಾಗ ಬೋರ್‌ವೆಲ್ಸ್ ವ್ಯವಸ್ಥಿತವಾಗಿ ಕೆಲಸ ಮಾಡುತ್ತಾ ಇಲ್ಲ. ಅದಕ್ಕೆ ಮುಖ್ಯವಾದ ಕಾರಣ ಪಂಪಿನ ದೋಷ ಎಂದು ವರದಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎನ್. ರಾಚಯ್ಯ.—ಆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಒಂದು ಬೋರ್‌ವೆಲ್‌ಗೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಹೇಳುವುದಾದರೆ ನನಗೆ ತಿಳಿದ ಮಟ್ಟಿಗೆ 10 ಸಾವಿರ ರೂಪಾಯಿ ಖರ್ಚಾಗುತ್ತದೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈಗ ಇದನ್ನು ಇಂಜಿನಿಯರಿಂಗ್ ಇಲಾಖೆಗೆ ವಹಿಸಿದರೆ ಅನುಕೂಲವಾಗುತ್ತದೆ. ಅದರ ಬದಲು ಟಿ.ಡಿ.ಬಿ ಯವರಿಗೇನೇ ಸ್ಪೇರ್ ಪಾರ್ಟ್ಸ್ ಕೊಟ್ಟು ಅವರಿಂದಲೇ ಈ ಕಾರ್ಯವನ್ನು ಮಾಡಿಸಿದರೆ ಆ ಗ್ರಾಮಸ್ಥರಿಗೆ ಬಹಳ ಅನುಕೂಲವಾಗುತ್ತದೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರು ಹೇಳಿದ ಸಲಹೆ ಬಹಳ ನೂಕ್ತವಾದುದು. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಗ್ಗದ ಬೆಲೆಯ ಪಂಪುಗಳನ್ನು ಅಂದರೆ 750 ರೂಪಾಯಿ ಆಗತಕ್ಕಂಥ ಪಂಪನ್ನು ಹಾಕಿದ್ದರಿಂದ ಆ ಗ್ರಾಮಾಂತರ ಜನಗಳಿಗೆ ಕುಡಿಯುವುದಕ್ಕೆ ನೀರು 4 ದಿವಸವೂ ಕೂಡ ಬರುವುದಿಲ್ಲ. ಅದರ ಬದಲು ರಾಂಡ್ ಷೇಪ್ ಇರತಕ್ಕಂಥ ಪಂಪನ್ನು ಅದು 1500 ರೂಪಾಯಿ ಆಗಬಹುದು, ಅಂತಹ ಪಂಪನ್ನು ಹಾಕಿದರೆ, ಒಂದೆರಡು ವರ್ಷವಾದರೂ ಅವರಿಗೆ ಕುಡಿಯುವ ನೀರಿನ ಸೌಕರ್ಯವಾಗಬಹುದು. ಅದುದರಿಂದ ಒಳ್ಳೆಯ ಪಂಪನ್ನು ಹಾಕುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.— ಶ್ರೀಮಾನ್ ಹನುಮೇಗೌಡರು ಸಮಾಧಾನವಾಗಿ ಕೇಳಿದರೆ ನಾನೂ ಕೂಡ ಸಮಾಧಾನವಾಗಿ ಉತ್ತರ ಹೇಳಬಹುದು. ಅನೇಕ ಸಂದರ್ಭದಲ್ಲಿ ಒಳ್ಳೆಯ ಕಬ್ಬಿಣ ಉಪಯೋಗಿಸದೇ ಇರುವುದರಿಂದ ಈರೀತಿ ತೊಂದರೆ ಬಂದಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ಪ್ರದೇಶದಲ್ಲಿ ಗ್ರಾಮಾಂತರ ಜನಗಳಿಗೆ ಕುಡಿಯುವ ನೀರನ್ನು ಸಕಾಲದಲ್ಲಿ ವ್ಯವಸ್ಥೆ ಮಾಡುವುದರ ಜೊತೆಗೆ ಆಗಾಗ್ಗೆ ಇದರಲ್ಲಿ ಬರುವ ತೊಂದರೆಗಳನ್ನೂ ನಿವಾರಣೆ ಮಾಡುವ ವಿಚಾರದಲ್ಲಿ ಸರ್ಕಾರ ಗಮನ ತೆಗೆದುಕೊಳ್ಳುತ್ತದೆ.

Smt. WINNIFRED FERNANDEZ.—There or no bore wells in South Kanara and Coorg Districts. What is the reason for not having bore welles in these two districts ?

Sri N. RACHAIAH.—We are not easily getting water from the bore wells there. That is what I have come to know during my tour in South Kanara District. If there is possibility of getting water, we will certainly try to do it.

MADAM SPEAKER.—Now Question Hour is over.

QUESTION FOR ANSWER ON THE DAY

(but not taken up)

Development of Indian System of Medicine

2. Sri PRABHAKAR TELKAR (Kalagi)—

Will the Minister for Health be pleased to state :—

(*a*) the number of Government Ayurvedic and Unani Dispensaries working in the State (Districtwise particulars be furnished) ;

(*b*) the annual expenditure incurred on these dispensaries ;

(*c*) whether the Government has any scheme of the development of the Indian Systems of medicine ;

(*d*) if so, the details of such scheme ?

Sri H. SIDDAVEERAPPA (Minister for Health)—

(*a*) Ayurvedic ... 25

Unani ... 19

Districtwise particulars are furnished in the Statement enclosed.

(*b*) Rs. 5,16,000.

(*c*) Yes.

(*d*) The particulars of the scheme is placed on the Table of the House. **

Calling Attention to a Matter of Urgent Public Importance :

re : acute mosquito nuisance in Bangalore City

Sri T. R. SHAMANNA (Fort)—I call the attention of the Hon. Minister for Law and Municipal Administration to the acute mosquito nuisance in all areas of Bangalore City.

---

* Copy placed in the Karnataka Ligislative Assembly *Vide* No. 4 dated 13-2-1975.